ಜಪಾನಿನ ಕಥೆಗಳು

# ಕಾಗೆ ಬಣ್ಣವೇಕೆ ಕಪ್ಪು ಮತ್ತು ಗೂಬೆ ಏಕೆ ನಿಶಾಚರ

ಬಂಗಾಳಿ ಮೂಲ : **ರಾಜಕೃಷ್ಣ ಭಟ್ಟಾಚಾರ್ಯ** ಚಿತ್ರ : **ಜುಂಕೋ ಭಟ್ಟಾಚಾರ್ಯ** ಕನ್ನಡಾನುವಾದ : **ಗಿರಿಜಾದೇವಿ**




ಒಂದು ಸಮಯದಲ್ಲಿ ಕಾಗೆಯೂ ಬೆಳ್ಳಗೇ ಇತ್ತು ಎಂದು ನಮ್ಮಲ್ಲಿ ಅನೇಕರಿಗೆ ತಿಳಿದಿಲ್ಲ. ಬಣ್ಣ ಬಣ್ಣದ ಪಕ್ಷಿಗಳನ್ನು ನೋಡಿ ಮೈ ಎಲ್ಲವೂ ಪೂರ್ತಿಯಾಗಿ ಅಚ್ಚ ಬಿಳುಪಾಗಿದ್ದ ಕಾಗೆ, ತನ್ನ ಬಣ್ಣವೂ ಬೇರೆ ಯಾವುದಾದರೂ ಬಣ್ಣವಾಗಿದ್ದರೆ ಎಷ್ಟು ಸುಂದರವಾಗಿ ಕಾಣುತ್ತಿದ್ದೆ ಎಂದು ಯೋಚಿಸಿತು. ಅಲ್ಲಿಯೇ ಸಮೀಪದಲ್ಲಿ ಗೂಬೆಯ ಒಂದು ಲಾಂಡ್ರಿ ಇತ್ತು. ಲಾಂಡ್ರಿಯಲ್ಲಿ ಗೂಬೆಗೆ ದಿನವೆಲ್ಲ ಬಿಡುವಿಲ್ಲದ ಕೆಲಸ. ಬಟ್ಟೆಗಳನ್ನು ಶುಭ್ರಗೊಳಿಸುವುದು, ಬಟ್ಟೆಗಳಿಗೆ ವಿಧ ವಿಧವಾದ ಬಣ್ಣಹಾಕುವುದು ಇವೆಲ್ಲ ಮಾಡಿ ಮಾಡಿ ಅದು ಸುಸ್ತಾಗಿ ಹೋಗುತ್ತಿತ್ತು. ಆದ್ದರಿಂದ ರಾತ್ರಿವೇಳೆ ಆವಶ್ಯಕತೆ ಇಲ್ಲದಿದ್ದಲ್ಲಿ ಮನೆಯಿಂದ ಹೊರಗೆ ಹೋಗುತ್ತಲೇ ಇರಲಿಲ್ಲ. ಗೂಬೆಯ ಹತ್ತಿರ ಬಣ್ಣಗಳಿಂದ ತುಂಬಿದ ತೊಟ್ಟಿಗಳಿವೆ ಎನ್ನುವ ಮಾಹಿತಿ ಪಡೆದ ಕಾಗೆ, ಒಂದು ದಿನ ಹೋಗಿ ತನ್ನ ಬಣ್ಣವನ್ನು ಬದಲಾಯಿಸಿಕೊಳ್ಳಲು ತೀರ್ಮಾನಿಸಿತು. ಒಂದು ದಿನ ಬೆಳ್ಳಂಬೆಳಗ್ಗೇ ಗೂಬೆಯ ಲಾಂಡ್ರಿಗೆ ಹೋಗಿ ಹೇಳಿತು, ''ಗೂಬೆರಾಯ, ನನಗೆ ಕೆಂಪು ಬಣ್ಣ ಹಾಕುತ್ತೀಯಾ? ಈ ಬಿಳೀಬಣ್ಣ ನನಗೆ ಬೇಸರವಾಗಿದೆ, ಸ್ವಲ್ಪವೂ ಇಷ್ಟವಾಗುತ್ತಿಲ್ಲ.'' ಗೂಬೆ ಹೇಳಿತು, ''ಅದಕ್ಕೇಕೆ ಚಿಂತೆ? ಬಾ, ನೀನು ಈ ಕೆಂಪು ಬಣ್ಣವಿರುವ ತೊಟ್ಟಿಯಲ್ಲಿ ಒಂದು ಮುಳುಗು ಹಾಕು. ನಿನಗೆ ಕೆಂಪುಬಣ್ಣ ಬಂದುಬಿಡುತ್ತದೆ.'' ಕಾಗೆ ಕೆಂಪುಬಣ್ಣದಲ್ಲಿ ಮುಳುಗಿ ಎದ್ದದ್ದೇ ತಡ, ಕೆಂಪಾಗಿಬಿಟ್ಟಿತು! ಕೆಂಪು ಬಣ್ಣದ ಕಾಗೆಯನ್ನು ನೋಡಿ ಇತರ ಪಕ್ಷಿಗಳು ಹೀಗೆ ಟೀಕೆ ಮಾಡಿದವು, ''ಅಯ್ಯೋ ದೇವರೇ, ಇದೆಂತಹ ಗಾಢವಾದ ಬಣ್ಣ ಮಾಡಿಕೊಂಡಿತು ಈ ಕಾಗೆ! ನೋಡಲಿಕ್ಕಾಗದು, ಸ್ವಲ್ಪವೂ ಚೆನ್ನಾಗಿಲ್ಲ.'' ಈ ಮಾತುಗಳನ್ನು ಕೇಳಿಸಿಕೊಂಡ ಕಾಗೆಗೆ ತೀವ್ರ ನಿರಾಶೆಯಾಯಿತು. ಬಹಳವಾಗಿ ಬೇಸರಗೊಂಡು ಮತ್ತೆ ಗೂಬೆಯ ಲಾಂಡ್ರಿಗೆ ಹೋಯಿತು. ಗೂಬೆಗೆ ಹೇಳಿತು, ''ಗೂಬೆರಾಯು, ಈ ಕೆಂಪು ಬಣ್ಣ ಬಹಳ ಗಾಢವಾಗಿ ಹೋಯಿತು. ಇದೇನೂ ನನಗೆ ಇಷ್ಟವಾಗುತ್ತಿಲ್ಲ. ನೀನೇ ಯಾವುದಾದರೂ ಒಳ್ಳೆಯ ಬಣ್ಣ ಮಾಡಿಕೊಡು.'' ಆಗ ಗೂಬೆ ಕಾಗೆಯನ್ನು ನೀಲಿಬಣ್ಣದಲ್ಲಿ ಮುಳುಗಿಸಿತು. ಈಗ ಕಡುಕೆಂಪು ಮತ್ತು ನೀಲಿಬಣ್ಣ ಮಿಶ್ರವಾಗಿ ಕಾಗೆಯ ಬಣ್ಣ ಬದನೆಕಾಯಿ ಬಣ್ಣಕ್ಕೆ ತಿರುಗಿತು. ಇದು ಕಾಗೆಗೆ ಸ್ವಲ್ಪವೂ ಇಷ್ಟವಾಗಲಿಲ್ಲ. ಅದು ಹೇಳಿತು, ''ಈ ಬಣ್ಣ ನನಗೆ ಬೇಡವೇ ಬೇಡ. ನೀನು ಯಾವುದಾದರೂ ಒಂದು ಅಸಾಧಾರಣವಾದ ಬಣ್ಣ ತಯಾರಿಸು. ಅದನ್ನು ಹಿಂದೆ ಯಾರೂ ನೋಡಿರಬಾರದು.'' ಗೂಬೆ ಬಹಳ ಯೋಚಿಸಿ ಒಂದು ತೀರ್ಮಾನಕ್ಕೆ ಬಂದಿತು. ತನ್ನಲ್ಲಿದ್ದ ಎಲ್ಲಾ ಬಣ್ಣಗಳನ್ನೂ ಸ್ವಲ್ಪ ಸ್ವಲ್ಪ ಮಿಶ್ರ ಮಾಡಿ ಒಂದು ಬಣ್ಣ ತಯಾರಿಸಿ, ಅದರಲ್ಲಿ ಕಾಗೆಯನ್ನು ಮುಳುಗಿಸಿತು. ತೊಟ್ಟಿಯಿಂದ ಹೊರಬಂದ ಕಾಗೆಗೆ ವಿಪರೀತ ಆನಂದವಾಗಿತ್ತು. ಈಗ ನನ್ನ ಅಂದದ ಬಣ್ಣ ನೋಡಿ ಎಲ್ಲರೂ ಬೆರಗಾಗಿಬಿಡುತ್ತಾರೆ ಎಂದು ಭಾವಿಸಿ, ಹಿರಿಹಿರಿ ಹಿಗ್ಗಿತು. ಒಂದು ಸಲ ತನ್ನ ಅಂದದ ಬಣ್ಣವನ್ನು ಕನ್ನಡಿಯಲ್ಲಿ ನೋಡಬೇಕೆಂದು ಅದಕ್ಕೆ ಆಲೋಚನೆ ಬಂತು. ಕನ್ನಡಿ ನೋಡಿದ್ದೇ ತಡ, ಕಾಗೆ ಕೋಪದಿಂದ ಕೆಂಡಾಮಂಡಲ! ಅದರ ಮೈ ಪೂರ್ತಿ ಕಪ್ಪುಬಣ್ಣಕ್ಕೆ ತಿರುಗಿತ್ತು! ಕಡುಕಪ್ಪು ಬಣ್ಣ!! ಎಲ್ಲಾ ಬಣ್ಣ ಮಿಶ್ರಮಾಡಿದರೆ ಕಪ್ಪುಬಣ್ಣವಲ್ಲದೆ ಬೇರೇನು ತಾನೇ ಆದೀತು? ಕಾಗೆ ಹುಚ್ಚುಹಿಡಿದಂತೆ ವರ್ತಿಸುತ್ತಾ ಗೂಬೆಯನ್ನು ಶಿಕ್ಷಿಸಲು ಅಟ್ಟಿಸಿಕೊಂಡು ಹೋಯಿತು. ಗೂಬೆ ತಪ್ಪಿಸಿಕೊಂಡು ಹಾರುತ್ತಾ ಎತ್ತಲೋ ಮರೆಯಾಗಿ ಹೋಯಿತು. ಕಾಗೆಗೆ ಅದನ್ನು ಹುಡುಕುವುದು ಸಾಧ್ಯವಾಗಲೇ ಇಲ್ಲ. ಅಲ್ಲಿಂದಾಚೆಗೆ ಗೂಬೆ ಹಗಲು ವೇಳೆ ಹೊರಗೆ ಬರುವುದನ್ನೇ ನಿಲ್ಲಿಸಿಬಿಟ್ಟಿತು. ಅದಕ್ಕೆ ಕಾಗೆ ಅಟ್ಟಿಸಿಕೊಂಡು ಬರುತ್ತದೆಂಬ ಭಯ. ಕಾಗೆಯ ಬಣ್ಣ ಶಾಶ್ವತವಾಗಿ ಕಪ್ಪಾಗಿ ಉಳಿದುಹೋಯಿತು. ಈ ಘಟನೆಯಿಂದಾಗಿ ಕಾಗೆ ಮತ್ತು ಗೂಬೆಯ ಸ್ನೇಹ ಕೊನೆಗೊಂಡಿತು.

